ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**09.08.2025 1.10 p.m.**
**<><><><>**

ಮುಖ್ಯಾಂಶಗಳು

1. ನೂತನ ಯೋಜನೆಯಡಿ ಮರು ಪ್ರಯಾಣ ಟಿಕೆಟ್‌ಗಳಿಗೆ ಶೇಕಡ ೨೦ರಷ್ಟು ರಿಯಾಯಿತಿ ನೀಡಲು ರೈಲ್ವೆ ಸಚಿವಾಲಯ ನಿರ್ಧಾರ
2. ಒಂದು ಲಕ್ಷದ ೫೧ ಸಾವಿರ ಕೋಟಿ ರೂಪಾಯಿ ಮೌಲ್ಯದ ಸಾರ್ವಕಾಲಿಕ ಗರಿಷ್ಠಕ್ಕೇರಿದ ವಾರ್ಷಿಕ ರಕ್ಷಣಾ ಉತ್ಪಾದನೆ
3. ಇಂದು ವಿಶ್ವ ಸಂಸ್ಕೃತ ದಿನ; ಪ್ರಾಚೀನ ಭಾಷೆಯ ಪ್ರಸ್ತುತತೆ ಸಾರಿದ ಪ್ರಧಾನಿ ನರೇಂದ್ರ ಮೋದಿ
4. ಗಿಡಮೂಲಿಕೆ ಔಷಧಿಗಳ ಕ್ಷೇತ್ರದಲ್ಲಿ ಜಾಗತಿಕ ನಿಯಂತ್ರಣ ಸಹಕಾರ ವಿಸ್ತರಿಸಲು ಭಾರತ ಬದ್ಧ - ಆಯುಷ್ ಸಚಿವಾಲಯ
5. ಏಷ್ಯನ್ ಸರ್ಫಿಂಗ್ ಚಂಪಿಯನ್ ಶಿಪ್; ಇದೇ ಮೊದಲ ಬಾರಿಗೆ ಸೆಮಿಫೈನಲ್ ಹಂತಕ್ಕೇರಿದ ಭಾರತದ ಇಬ್ಬರು ಕ್ರೀಡಾಪಟುಗಳು

<><><><>

ಪ್ರಯಾಣಿಕರ ಅನುಕೂಲಕ್ಕಾಗಿ ಗೃಹ ಸಚಿವಾಲಯ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದ್ದು, ಈಗ ಟಿಕೆಟ್ ದರದಲ್ಲಿ ವಿನಾಯಿತಿ ನೀಡಲು ನಿರ್ಧರಿಸಿದೆ. ಮರುಪ್ರಯಾಣ ಸೇರಿದ ಪ್ರವಾಸವನ್ನು ಕಾಯ್ದಿರಿಸುವ ಪ್ರಯಾಣಿಕರಿಗೆ ಮರು ಪ್ರಯಾಣದ ಟಿಕೆಟ್‌ಗೆ ಶೇಕಡ ೨೦ರಷ್ಟು ವಿನಾಯಿತಿ ದೊರೆಯಲಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಈ ರೀತಿ ಒಂದೆಡೆ ಹೋಗಿ ಬರುವ ಟಿಕೆಟ್‌ಗಳನ್ನು ಕಾಯ್ದಿರಿಸುವ ಪ್ರಯಾಣಿಕರಿಗೆ ಯೋಜನೆಗಳು ಬದಲಾದಲ್ಲಿ ಅಥವಾ ಕಾಯ್ದಿರಿಸಿದ ಟಿಕೆಟ್ ರದ್ದುಮಾಡಲು ನಿರ್ಧರಿಸಿದಲ್ಲಿ ಅಂತಹ ಯಾವುದೇ ರೀತಿಯ ಟಿಕೆಟ್‌ಗಳಿಗೆ ಮರು ಪಾವತಿ ಅನ್ವಯವಾಗುದಿಲ್ಲ. ಈ ಯೋಜನೆಯಡಿ ಟಿಕೆಟ್‌ಗಳ ಕಾಯ್ದಿರಿಸುವಿಕೆ ಇದೇ ೧೪ರಿಂದ ಆರಂಭವಾಗಲಿದೆ. ಪ್ರಸ್ತುತ ಟಿಕೆಟ್ ಕಾಯ್ದಿರಿಸಲು ಕೇವಲ ಮುಂದಿನ ೬೦ ದಿನಗಳೊಳಗೆ ಇರುವ ಪ್ರಯಾಣವನ್ನು ಮಾತ್ರ ಕಾಯ್ದಿರಿಸಬಹುದಾಗಿದೆ. ಆದರೆ

ಈ ಯೋಜನೆಯಡಿ ಪ್ರಯಾಣದ ದಿನ ೬೦ ದಿನಗಳ ನಂತರದ ಪ್ರಯಾಣವನ್ನೂ ಸಹ ಕಾಯ್ದಿರಿಸಬಹುದಾಗಿದೆ.

<><><><>

೨೦೨೪-೨೫ನೇ ಹಣಕಾಸು ವರ್ಷದಲ್ಲಿ ವಾರ್ಷಿಕ ರಕ್ಷಣಾ ಉತ್ಪಾದನೆಯು ಸಾರ್ವಕಾಲಿಕ ಗರಿಷ್ಠ ೧ ಲಕ್ಷದ ೫೦ ಸಾವಿರದ ೫೯೦ ಕೋಟಿ ರೂಪಾಯಿಗೆ ಏರಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಈ ಮೈಲಿಗಲ್ಲು ಹಿಂದಿನ ಹಣಕಾಸು ವರ್ಷದ ಉತ್ಪಾದನೆ ೧.೨೭ ಲಕ್ಷ ಕೋಟಿ ರೂಪಾಯಿಗಿಂತ ಶೇಕಡ ೧೮ ರಷ್ಟು ಬೆಳವಣಿಗೆಯನ್ನು ಮತ್ತು ೨೦೧೯-೨೦ನೇ ಹಣಕಾಸು ವರ್ಷದಿಂದ ಶೇಕಡ ೯೦ರಷ್ಟು ಹೆಚ್ಚಳವನ್ನು ದಾಖಲಿಸಿದೆ ಎಂದು ಸಚಿವರು ಮಾಹಿತಿ ನೀಡಿದರು. ರಕ್ಷಣಾ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಒಟ್ಟು ಉತ್ಪಾದನೆಯಲ್ಲಿ ಸುಮಾರು ಶೇಕಡ ೭೭ ರಷ್ಟು ಪಾಲು ಹೊಂದಿದ್ದರೆ, ಖಾಸಗಿ ವಲಯದ ಪಾಲು ಶೇಕಡ ೨೩ ರಷ್ಟಿದೆ. ೨೦೨೩-೨೪ನೇ ಹಣಕಾಸು ವರ್ಷದಲ್ಲಿ ಶೇ. ೨೧ ರಷ್ಟಿದ್ದ ಖಾಸಗಿ ವಲಯದ ಪಾಲು ೨೦೨೪-೨೫ನೇ ಹಣಕಾಸು ವರ್ಷದಲ್ಲಿ ಶೇ. ೨೩ ಕ್ಕೆ ಏರಿಕೆಯಾಗಿದ್ದು, ಇದು ದೇಶದ ರಕ್ಷಣಾ ಪರಿಸರ ವ್ಯವಸ್ಥೆಯಲ್ಲಿ ಬೆಳೆಯುತ್ತಿರುವ ಖಾಸಗಿ ವಲಯದ ಪಾತ್ರವನ್ನು ಪ್ರತಿಬಿಂಬಿಸುತ್ತದೆ. ೨೦೨೪-೨೫ನೇ ಹಣಕಾಸು ವರ್ಷದಲ್ಲಿ ಡಿಪಿಎಸ್‌ಯುಗಳು ಮತ್ತು ಖಾಸಗಿ ವಲಯದ ಒಟ್ಟಾರೆ ಉತ್ಪಾದನೆಯು ಕ್ರಮವಾಗಿ ಶೇಕಡ ೧೬ ಮತ್ತು ಶೇಕಡ ೨೮ ರಷ್ಟು ಹೆಚ್ಚಾಗಿದೆ.

<><><><>

ಶ್ರಾವಣ ಹುಣ್ಣಿಮೆಯ ದಿನವಾದ ಇಂದು ಆಚರಿಸಲಾಗುವ ವಿಶ್ವ ಸಂಸ್ಕೃತ ದಿನದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಸಮಸ್ತ ಜನತೆಗೆ ಶುಭಾಶಯ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, ಸಂಸ್ಕೃತ ಒಂದು ಕಾಲಾತೀತ ಜ್ಞಾನದ ಮೂಲವಾಗಿದ್ದು, ವಿವಿಧ ವಲಯಗಳಾದ್ಯಂತ ಅದರ ಪ್ರಭಾವವನ್ನು ನಾವು ಕಾಣಬಹುದು. ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ಸಂಸ್ಕೃತ ಕಲಿಕಾ ಕೇಂದ್ರಗಳು, ಸಂಸ್ಕೃತ ವಿದ್ವಾಂಸರಿಗೆ ಆರ್ಥಿಕ ನೆರವು ಮತ್ತು ಪ್ರಾಚೀನ ಹಸ್ತಪ್ರತಿಗಳನ್ನು ಡಿಜಿಟಲೀಕರಣಗೊಳಿಸುವ ಜ್ಞಾನ ಭಾರತಂ ಯೋಜನೆ ಮೂಲಕ ಕಳೆದ ದಶಕದಲ್ಲಿ ಸಂಸ್ಕೃತವನ್ನು ಹೆಚ್ಚು ಜನಪ್ರಿಯಗೊಳಿಸಲು ಹಲವು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.  ಈ ಎಲ್ಲಾ ಕ್ರಮಗಳು ಅಸಂಖ್ಯಾತ ವಿದ್ಯಾರ್ಥಿಗಳು

ಹಾಗೂ ಸಂಶೋಧಕರಿಗೆ ಪ್ರಯೋಜನಕಾರಿಯಾಗಿದೆ. ಈ ದಿನ ಜಗತ್ತಿನೆಲ್ಲೆಡೆ ಸಂಸ್ಕೃತವನ್ನು ಕಲಿಯುತ್ತಿರುವ ಮತ್ತು ಜನಪ್ರಿಯಗೊಳಿಸುತ್ತಿರುವ ಪ್ರತಿಯೊಬ್ಬರ ಪ್ರಯತ್ನವನ್ನು ಪ್ರಶಂಸಿಸುವ ಒಂದು ಕ್ಷಣವಾಗಿದೆ ಎಂದು ಪ್ರಧಾನಿ ನುಡಿದಿದ್ದಾರೆ.

<><><><>

ಸಹೋದರ ಸಹೋದರಿಯರ ನಡುವಿನ ವಿಶೇಷ ಬಾಂಧವ್ಯದ ಹಬ್ಬವಾದ ರಕ್ಷಾ ಬಂಧನವನ್ನು ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ, ಸಹೋದರಿಯರು ತಮ್ಮ ಸಹೋದರರಿಗೆ ರಾಖಿಯನ್ನು ಕಟ್ಟಿ, ಅವರ ಸಮೃದ್ಧಿ, ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತಾರೆ. ಪ್ರತಿಯಾಗಿ, ಸಹೋದರರು ತಮ್ಮ ಸಹೋದರಿಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡುತ್ತಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಮಸ್ತ ನಾಗರಿಕರಿಗೆ ರಕ್ಷಾ ಬಂಧನದ ಶುಭಾಶಯ ಕೋರಿದ್ದಾರೆ. ರಕ್ಷಾ ಬಂಧನದ ಪವಿತ್ರ ಹಬ್ಬವು ಸಮಾಜದಲ್ಲಿ ಸಾಮರಸ್ಯ ಮತ್ತು ಏಕತೆಯ ಮನೋಭಾವವನ್ನು ಉತ್ತೇಜಿಸುತ್ತದೆ, ಈ ಸಂದರ್ಭವು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನೈತಿಕ ಮೌಲ್ಯಗಳನ್ನು ಸಂರಕ್ಷಿಸಲು ಒಂದು ಅವಕಾಶವಾಗಿದೆ ಮತ್ತು ಇದು ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಮತ್ತು ಅವರನ್ನು ಗೌರವಿಸುವ ಪ್ರತಿಯೊಬ್ಬರ ದೃಢಸಂಕಲ್ಪವನ್ನು ಬಲಪಡಿಸುತ್ತದೆ. ಪ್ರತಿಯೊಬ್ಬ ಮಹಿಳೆಯೂ ಸುರಕ್ಷಿತ ಎಂದು ಭಾವಿಸುವ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡಬಹುದಾದ ಸಮೃದ್ಧ ದೇಶವನ್ನು ನಿರ್ಮಿಸಲು ಜನರು ಪ್ರತಿಜ್ಞೆ ಮಾಡಬೇಕೆಂದು ರಾಷ್ಟ್ರಪತಿ ಕರೆ ನೀಡಿದ್ದಾರೆ.

<><><><>

ಗಿಡಮೂಲಿಕೆ ಔಷಧಿಗಳ ಕ್ಷೇತ್ರದಲ್ಲಿ ಜಾಗತಿಕ ನಿಯಂತ್ರಣ ಸಹಕಾರ ವಿಸ್ತರಿಸಲು ಭಾರತ ಬದ್ಧವಾಗಿದೆ ಎಂದು ಆಯುಷ್ ಸಚಿವಾಲಯದ ಕಾರ್ಯದರ್ಶಿ ವೈದ್ಯ ರಾಜೇಶ್ ಕೋಟೆಚಾ ತಿಳಿಸಿದ್ದಾರೆ. ಆಯುಷ್ ಸಚಿವಾಲಯ ಆಯೋಜಿಸಿದ್ದ ಮೂರು ದಿನಗಳ ವಿಶ್ವ ಆರೋಗ್ಯ ಸಂಸ್ಥೆ - ಅಂತಾರಾಷ್ಟ್ರೀಯ ಗಿಡಮೂಲಿಕೆ ಔಷಧಿಗಳ ನಿಯಂತ್ರಣ ಸಹಕಾರ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದ ಅವರು, ಗಿಡಮೂಲಿಕೆ ಔಷಧಿಗಳ ಸುರಕ್ಷತೆ ಮತ್ತು ನಿಯಂತ್ರಣ ಕುರಿತ ಕಾರ್ಯಕಾರಿ ಗುಂಪು-೧ ಹಾಗೂ ಪರಿಣಾಮಕಾರಿತ್ವ ಮತ್ತು ಉದ್ದೇಶಿತ ಬಳಕೆ ಕುರಿತ ಕಾರ್ಯಕಾರಿ ಗುಂಪು-೩ರಲ್ಲಿ ಭಾರತದ ಮುಂದಾಳತ್ವದಲ್ಲಿ ಸಾಧಿಸಿರುವ ಮುನ್ನಡೆ ಕುರಿತು

ಪ್ರಸ್ತಾಪಿಸಿದರು.  ಇದೇ ವೇಳೆ ಅವರು, ಆಯುಷ್ ಗ್ರಿಡ್ ಅಡಿ ಕೈಗೊಳ್ಳಲಾಗಿರುವ ಪ್ರಮುಖ ಡಿಜಿಟಲ್ ಉಪಕ್ರಮಗಳಾದ ಆಯುಷ್ ಸುರಕ್ಷಾ ಪೋರ್ಟಲ್, ಇ-ಔಷಧಿ ಕುರಿತು ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಭೂತಾನ್, ಬ್ರೂನೈ, ಕ್ಯೂಬಾ, ಘಾನಾ, ಇಂಡೋನೇಷ್ಯಾ, ಜಪಾನ್, ನೇಪಾಳ, ಪೆರಗ್ವೆ, ಪೋಲ್ಯಾಂಡ್, ಶ್ರೀಲಂಕಾ, ಉಗಾಂಡದ ಪ್ರತಿನಿಧಿಗಳು ಭಾಗವಹಿಸಿದ್ದರು. ಬ್ರೆಜಿಲ್, ಈಜಿಪ್ಟ್ ಮತ್ತು ಅಮೆರಿಕದ ನಿಯೋಗಗಳು ವರ್ಚುವಲ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡವು.

<><><><>

ಬ್ರಿಟೀಷರ ಆಡಳಿತದ ವಿರುದ್ಧ ಭಾರತ ನಡೆಸಿದ ಪ್ರಮುಖ ಹೋರಾಟಗಳಲ್ಲಿ ಒಂದಾದ ಕ್ವಿಟ್ ಇಂಡಿಯಾ ಚಳವಳಿ ೮೩ ವರ್ಷಗಳನ್ನು ಪೂರೈಸಿದೆ.. ಈ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ ವೀರ ಹೋರಾಟಗಾರರನ್ನು ಸ್ಮರಿಸಿದ್ದು, ಅವರ ತ್ಯಾಗ, ಧೈರ್ಯ ಜನರಲ್ಲಿ ದೇಶಭಕ್ತಿಯ ಕಿಡಿಯನ್ನು ಹೊತ್ತಿಸಿತು ಮತ್ತು ಸ್ವಾತಂತ್ರ್ಯದೆಡೆಗಿನ ಪಯಣದಲ್ಲಿ ಅಸಂಖ್ಯಾತ ಜನರನ್ನು ಒಂದಾಗಿಸಿತು ಎಂದು ಹೇಳಿದ್ದಾರೆ.

<><><><>

ಜಮ್ಮು-ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭಾರತೀಯ ಸೇನೆ ನಡೆಸುತ್ತಿರುವ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ ೯ನೇ ದಿನಕ್ಕೆ ಕಾಲಿಟ್ಟಿದೆ. ಈ ನಡುವೆ ಕುಲ್ಗಾಮ್ ಜಿಲ್ಲೆಯ ಅಖಾಲ್ ಅರಣ್ಯ ಪ್ರದೇಶದಲ್ಲಿ ನಡೆಸಿದ ಕಾರ್ಯಾಚರಣೆ ವೇಳೆ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಸೇನಾ ಜವಾನರು ಅಸುನೀಗಿದ್ದಾರೆ.  ಈ ತಿಂಗಳ ಒಂದರಿಂದಲೇ ಭಯೋತ್ಪಾದಕರು ಹಾಗೂ ಸೇನಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ಆರಂಭವಾಗಿತ್ತು. ಶ್ರೀನಗರ ಮೂಲದ ಚಿನಾರ್ ಕಾರ್ಪ್ಸ್ ಪಡೆಯ ಸೇನಾ ವಕ್ತಾರ ಸಾಮಾಜಿಕ ಮಾಧ್ಯಮದಲ್ಲಿ ಹುತಾತ್ಮ ಸಿಬ್ಬಂದಿಯ ಮಾಹಿತಿ ಹಂಚಿಕೊಂಡು, ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ ಶಂಕಿತ ಪ್ರದೇಶಗಳ ಸುತ್ತ ಭದ್ರತಾ ಪಡೆಗಳು ಕಣ್ಗಾವಲನ್ನು ತೀವ್ರಗೊಳಿಸಿದ್ದು, ನಿನ್ನೆ ರಾತ್ರಿಯೂ ಎನ್‌ಕೌಂಟರ್ ಸ್ಥಳದಲ್ಲಿ ತೀವ್ರ ಸ್ಫೋಟಗಳು ಮತ್ತು ಗುಂಡಿನ ದಾಳಿಗಳು ಮುಂದುವರಿಯಿತು.

<><><><>

ಇದೇ ೧೫ರಂದು  ರ? ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣದಲ್ಲಿ

ದೃಢಪಡಿಸಿರುವ ಅವರು, ಅಲಾಸ್ಕಾದಲ್ಲಿ ರಷ್ಯಾ ಅಧ್ಯಕ್ಷರೊಂದಿಗೆ ಉಕ್ರೇನ್ ಯುದ್ಧ ಕೊನೆಗಾಣಿಸುವ ಬಗ್ಗೆ ಮಾತುಕತೆ ನಡೆಸಲಿದ್ದಾರೆ. ವಿವಿಧ ಜಾಗತಿಕ ಬಿಕ್ಕಟ್ಟುಗಳ ಪರಿಹಾರದ ಭಾಗವಾಗಿ ಅರ್ಮೇನಿಯಾ ಮತ್ತು ಅಜರ್‌ಬೈಜಾನ್ ನಡುವೆ ಶಾಂತಿ ಒಪ್ಪಂದ ಅನಾವರಣಗೊಳಿಸಿದ ಕೆಲವೇ ಗಂಟೆಗಳಲ್ಲಿ ಅಧ್ಯಕ್ಷ ಟ್ರಂಪ್, ರಷ್ಯಾ ಅಧ್ಯಕ್ಷರೊಂದಿಗೆ ಸಭೆ ಕುರಿತು ಘೋಷಿಸಿದ್ದಾರೆ. ಅಲಾಸ್ಕಾದಲ್ಲಿ ಈ ಸಭೆ ನಡೆದಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಈ ದಶಕದಲ್ಲೇ ಕೈಗೊಳ್ಳುತ್ತಿರುವ ಮೊದಲ ಅಮೆರಿಕ ಭೇಟಿ ಇದಾಗಿರಲಿದೆ. ಕಳೆದ ಬಾರಿ ೨೦೧೫ರ ಸೆಪ್ಟೆಂಬರ್‌ನಲ್ಲಿ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ ಅವರೊಂದಿಗೆ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ರಷ್ಯಾ ಅಧ್ಯಕ್ಷರು ಅಮೆರಿಕಕ್ಕೆ ಭೇಟಿ ನೀಡಿದ್ದರು.

<><><><>

ಉತ್ತರಾಖಂಡದ ಪ್ರವಾಹಪೀಡಿತ ಉತ್ತರಕಾಶಿ ಜಿಲ್ಲೆಯಲ್ಲಿ ರಕ್ಷಣಾ ಹಾಗೂ ಪರಿಹಾರ ಕಾರ್ಯಕ್ರಮ ಮುಂದುವರಿದಿದೆ. ಭಾರತೀಯ ಸೇನೆ ರಾಜ್ಯ ವಿಪತ್ತು ಪ್ರತಿಕ್ರಿಯಾ ಪಡೆ, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ಪಡೆ, ಇಂಡೋ-ಟಿಬೆಟ್ ಗಡಿ ಪೊಲೀಸ್ ಸೇರಿದಂತೆ ಹಲವು ತಂಡಗಳು ಸಮನ್ವಯದಿಂದ ಹರ್ಷಿಲ್ ಮತ್ತು ಧರಾಲಿಯಲ್ಲಿ ಜನರನ್ನು ರಕ್ಷಿಸುತ್ತಿವೆ. ಈವರೆಗೆ ಸುಮಾರು ೬೨೯ ಸಂತ್ರಸ್ತರನ್ನು ರಕ್ಷಿಸಲಾಗಿದೆ. ರಾಜ್ಯ ಪೊಲೀಸ್ ಮಹಾನಿರ್ದೇಶಕ ದೀಪಂ ಸೇಠ್ ವಿಪತ್ತು ಪೀಡಿತ ಪ್ರದೇಶದಲ್ಲಿ ಕ್ಷೇತ್ರ ಪರಿಶೀಲನೆ ನಡೆಸಿದರು ಮತ್ತು ತ್ವರಿತವಾಗಿ ಶೋಧ ಕಾರ್ಯಾಚರಣೆ ನಡೆಸಿ, ನಾಪತ್ತೆಯಾದವರನ್ನು ರಕ್ಷಿಸುವಂತೆ ಸಿಬ್ಬಂದಿಗೆ ಸೂಚಿಸಿದರು. ಸಂತ್ರಸ್ತ ಕುಟುಂಬಗಳಿಗೆ ತಲಾ ೫ ಸಾವಿರ ರೂಪಾಯಿ ತ್ವರಿತ ಪರಿಹಾರವಾಗಿ ನೀಡಲು ನಿರ್ಧರಿಸಲಾಗಿದೆ. ವಿಪತ್ತಿನಿಂದಾದ ನಷ್ಟದ ಕುರಿತು ವಿಸ್ತೃತ ವರದಿ ಬಂದ ನಂತರ ಅಗತ್ಯ ಪರಿಹಾರವನ್ನು ಬಿಡುಗಡೆಗೊಳಿಸಲಾಗುವುದು ಎಂದು ಜಿಲ್ಲಾ ಸತ್ರ ನ್ಯಾಯಾಧೀಶ ಪ್ರಶಾಂತ್ ಆರ್ಯ ತಿಳಿಸಿದ್ದಾರೆ.

<><><><>

ಮಹಾಬಲಿಪುರಂನಲ್ಲಿ ನಡೆಯುತ್ತಿರುವ ಏಷ್ಯನ್ ಸರ್ಫಿಂಗ್ ಚಂಪಿಯನ್ ಶಿಪ್‌ನಲ್ಲಿ ಭಾರತಕ್ಕಿಂದು ಐತಿಹಾಸಿಕ ದಿನವಾಗಿದ್ದು, ಇದೇ ಮೊದಲ ಬಾರಿಗೆ ಭಾರತದ ಇಬ್ಬರು ಕ್ರೀಡಾಪಟುಗಳು ಸೆಮಿಫೈನಲ್ ಹಂತಕ್ಕೇರಿದ್ದಾರೆ. ಭಾರತದ ರಮೇಶ್ ಬುದಿಹಾಲ್ ಮತ್ತು ಕಿಶೋರ್ ಕುಮಾರ್ ಮುಕ್ತ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿ ಸೆಮಿಫೈನಲ್‌ಗೆ ಲಗ್ಗೆ

ಇಟ್ಟಿದ್ದಾರೆ. ಬುದಿಹಾಲ್ ೧೪.೮೪ ಹಾಗೂ ಕಿಶೋರ್ ಕುಮಾರ್ ೧೦.೫೦ ಅಂಕಗಳೊಂದಿಗೆ ಮುಂದಿನ ಹಂತಕ್ಕೇರಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>